ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 16-02-2021 ರಂದು ಪ್ರಮಾಣೀಕರಿಸಲಾಯಿತು.

## ಮುಖ್ಯ ವಿಚಾರಣೆಃ ಶ್ರೀ. ಬಿ. ಎಮ್. ಎಸ್. ವಕೀಲರಿಂದಃ

ನಾನು ಈ ದಾವೆಯಲ್ಲಿ ವಾದಿ ಇರುತ್ತೇನೆ. ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮುಖಾಂತರ ಸಲ್ಲಿಸಿರುತ್ತೇನೆ ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ನನಗೆ ತಿಳಿದ ಮಾಹಿತಿಯಂತೆ ಸತ್ಯವಾಗಿರುತ್ತವೆ. ಪ್ರಮಾಣ ಪತ್ರವನ್ನು ನಾನು ನೀಡಿದ ಮಾಹಿತಿ ಮೇರೆಗೆ ತಯಾರಿಸಲಾಗಿರುತ್ತದೆ. ಪ್ರಮಾಣ ಪತ್ರವನ್ನು ನನಗೆ ಓದಿ ಹೇಳಲಾಗಿದ್ದು, ಅದನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ.

## ನಾನು ಈ ಕೆಳಗಿನ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ಅವುಗಳನ್ನು ಕೆಳಗಿನಂತೆ ಗುರುತಿಸಲಾಗಿರುತ್ತದೆ.

| | |
|---|---|
| ನಿಪಿಃ 1 | ಜಕ್ಕಲಿ ಗ್ರಾಮದ ವಿ.ಪಿ.ಸಿ ಸಂಖ್ಯೆ 59/ಬಿ/2 ಮನೆ ಆಸ್ತಿಯ ಉತಾರ |
| ನಿಪಿಃ 2 | ಜಕ್ಕಲಿ ಗ್ರಾಮದ ವಿ.ಪಿ.ಸಿ ಸಂಖ್ಯೆ 59/ಬಿ/1 ಮನೆ ಆಸ್ತಿಯ ಉತಾರ |
| ನಿಪಿಃ 3 | ಪಂಚಾಯತಿ ಠರಾವಿನ ದೃಢೀಕೃತ ಪ್ರತಿ (ಒಟ್ಟು 2 ಪುಟಗಳು) |
| ನಿಪಿಃ 4 | ದಿನಾಂಕಃ 22-09-2015 ರ ಕ್ರಯ ಪತ್ರದ ದೃಢೀಕೃತ ಪ್ರತಿ |
| ನಿಪಿಃ 5 | ದಿನಾಂಕಃ 30-09-2015 ರಂದು ನಾನು ಖುದ್ದಾಗಿ 2 ನೇ ಪ್ರತಿವಾದಿಗೆ ನೀಡಿದ ನೋಟಸ್ ನ ಪ್ರತಿ |
| ನಿಪಿಃ 6 | ಅಂಚೆ ರಶೀದಿ |
| ನಿಪಿಃ 7 | ಅಂಚೆ ಸ್ವೀಕೃತಿ |

ನನ್ನ ದಾವೆಯನ್ನು ಮಾನ್ಯ ಮಾಡಬೇಕೆಂದು ಮಾನ್ಯ ನ್ಯಾಯಲಯಕ್ಕೆ ವಿನಂತಿಸಿಕೊಳ್ಳುತ್ತೇನೆ.

ಪ್ರತಿವಾದಿಗಳು ತಮ್ಮ ಪ್ರತಿವಾದ ಪತ್ರ ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

ಅಧಿಕ ದಿವಾಣಿ ನ್ಯಾಯಾಧೀಶರು, ರೋಣ